# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 818 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್.ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 15-12-2020 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಲ್ಯಾಂಪ್ಸ್ ಸಂಸ್ಥೆಯನ್ನು ಮುಚ್ಚಲಾಗಿದೆಯೇ: | ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಕಾರ್ಖಾನೆಯನ್ನು ಸರ್ಕಾರದ ಆದೇಶದ ಮೇರೆಗೆ ದಿನಾಂಕ 11.6.2003 ರಿಂದ ಮುಚ್ಚಲಾಗಿದೆ. |
| ಆ) | ಹಾಗಿದ್ದಲ್ಲಿ, ಸಂಸ್ಥೆಯಲ್ಲಿ ಉಳಿದಿರುವ ಸಿಬ್ಬಂದಿ ಎಷ್ಟು; ಆ ಸಿಬ್ಬಂದಿಗಳನ್ನು ಯಾವ ಯಾವ ಸಂಸ್ಥೆಗಳಿಗೆ ನಿಯೋಜನೆ ಮಾಡಲಾಗಿದೆ; (ವಿವರ ನೀಡುವುದು) | ಮೈಸೂರು ಲ್ಯಾಂಪ್ಸ್ ಕಾರ್ಖಾನೆಯನ್ನು ಮುಚ್ಚಿದ ನಂತರ 88 ನೌಕರರು ಉಳಿದಿರುತ್ತಾರೆ. ಈ ಪೈಕಿ 4 ನೌಕರರು ಮೃತರಾಗಿದ್ದು 5 ನೌಕರರು ನಿವೃತ್ತಿ ವಯಸ್ಸನ್ನು ದಾಟಿರುತ್ತಾರೆ.<br><br>ಉಳಿಕೆ 79 ನೌಕರರಿಗೆ ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಯಲ್ಲಿ ವಿಲೀನಗೊಳಿಸಿ ಆದೇಶ ಹೊರಡಿಸಲಾಗಿದೆ. ಈ ಪೈಕಿ 63 ನೌಕರರು ಕಾರ್ಯವರದಿ ಮಾಡಿಕೊಂಡಿದ್ದು, 16 ನೌಕರರು ಕಾರ್ಯ ವರದಿಮಾಡಿಕೊಂಡಿರುವುದಿಲ್ಲ.<br><br>ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ 19 ಮೈಸೂರು ಲ್ಯಾಂಪ್ಸ್ ನೌಕರರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: DPAR/66/DiSeNi/2019, ದಿನಾಂಕ 13.5.2020ರಲ್ಲಿ ಅವರು ಕಾರ್ಯನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಇಲಾಖೆಗಳಲ್ಲಿ ಅರ್ಹತೆಯ ಆಧಾರದ ಮೇಲೆ ವಿಲೀನಗೊಳ್ಳಲು ಅವಕಾಶ ಕಲ್ಪಿಸಲಾಗಿದೆ ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ. |
| ಇ) | ಮೈಸೂರು ಲ್ಯಾಂಪ್ಸ್ ಸಂಸ್ಥೆಯಲ್ಲಿ ನೌಕರರು ತಮ್ಮ ಡಿ.ಎ. ಹಾಗೂ ಇನ್ನಿತರೆ ಸೌಲಭ್ಯಗಳನ್ನು ಪಡೆಯದೇ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ, ಇವರಿಗೆ ಸರ್ಕಾರದಿಂದ ನೆರವು ನೀಡಲಾಗುವುದೇ; | ಈ ವಿಷಯದ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆಗಳು ಬಾಕಿ ಇದ್ದು ಇತ್ಯರ್ಥವಾಗಬೇಕಾಗಿರುತ್ತದೆ. |
| ಈ) | ಮೈಸೂರು ಲ್ಯಾಂಪ್ಸ್ ಸಂಸ್ಥೆಯ ಒಟ್ಟು ಆಸ್ತಿಮೌಲ್ಯ ಎಷ್ಟು; ಈ ಆಸ್ತಿಯನ್ನು ಯಾವ ಸಂಸ್ಥೆಗೆ ಪರಭಾರೆ ಮಾಡಲಾಗಿದೆ; ನೌಕರರು ಹಾಗೂ ಷೇರುದಾರರಿಗೆ ನೀಡಬೇಕಾಗಿರುವ ಹಣದ ಮೊತ್ತ ಎಷ್ಟು? (ವಿವರ ನೀಡುವುದು) | ಮೈಸೂರು ಲ್ಯಾಂಪ್ಸ್ ಸಂಸ್ಥೆಯ ಒಟ್ಟು ಆಸ್ತಿಯ ಮೌಲ್ಯ 31.3.2020ರ ಅಂತ್ಯದ ಲೆಕ್ಕಪತ್ರದಂತೆ ರೂ.11.14 ಕೋಟಿ ಆಗಿರುತ್ತದೆ. ಸಂಸ್ಥೆಯ ಭೂಸ್ವತ್ತಿನ ಮೌಲ್ಯವನ್ನು 1992ರ ನಂತರ ಪುನರ್ ಮೌಲ್ಯ ಮಾಡಿರುವುದಿಲ್ಲ.<br><br>ಸಂಸ್ಥೆಯ ಆಸ್ತಿಯನ್ನು ಕರ್ನಾಟಕ ಸರ್ಕಾರಕ್ಕೆ ಮಾತ್ರ ಅಡಮಾನ ಮಾಡಲಾಗಿದೆ.<br><br>ಷೇರುದಾರರಿಗೆ ಹಾಗೂ ನೌಕರರಿಗೆ ನೀಡಬೇಕಾದ ಹಣದ ಮೌಲ್ಯದ ಬಗ್ಗೆ ನಿರ್ಣಯವಾಗಿರುವುದಿಲ್ಲ. |

ಸಿಐ 24 ಸಿಇಎಲ್ 2020 (ಇ)

(ಜಗದೀಶ ಶೆಟ್ಟರ),
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

Annexure -

## The Mysore Lamp Works Limited

### Abstract of Status of Employees subsequent to closure of the Company

| Sl. No. | Particulars | No. of Employees | | |
|---|---|---|---|---|
| 1 | No. of Employees at the time of closure | 1556 | | |
| 2 | No. of Employees avail VRS | 1420 | | |
| 3 | No. of Employees absorbed in various Boards & Corporations | 48 | | |
| 4 | No. of Employees who remained in the company even after closure (1-2-3) | 88 | | |
| 5 | No. of Employees deceased before issual of absorption order by KSMCL | 4 | | |
| 6 | No. of Employees attained superannuation before issual of absorption order by KSMCL | 5 | | |
| 7 | No. of Employees to whom orders were issued for absorption in KSMCL | 79 | | |
| | | | Orders issued | Reported |
| (a) | Order dated 10.7.2014 | | 4 | 4 |
| (b) | Order dated 30.5.2016 | | 20 | 6 |
| (c) | Order dated 28.12.2016 | | 55 | 53 |
| 8 | Total No. of Employees reported for work in KSMCL | 63 | | |
| 9 | No. of Employees not reported for work in KSMCL | 16 | | |

**Status of employees covered under DPAR Notification dated 13.5.2020 providing opportunity for absorption of Mysore Lamp Works employees who were on deputation with various Government Departments**

| Sl. No. | Particulars | No. of Employees | Remarks |
|---|---|---|---|
| 1 | No. of Employees to whom DPAR Notification is applicable<br>(a) Health & Family Welfare – 10<br>(b) KGID – 3<br>(c) Commercial Tax – 2<br>(d) Energy – 2<br>(e) PWD – 1<br>(f) Secretariat – 1 | 19 | These 19 employees were among the 20 who were issued absorption order by KSMCL vide order dated 30.5.2016 |
| 2 | No. of Employees out of the above already reported in KSMCL as per Order dated 30.5.2016 | 5 | |